ಇ) ಅಂತರ್ಜಲ ಮಟ್ಟವನ್ನು ವೃದ್ಧಿಸಲು ಮಳೆಗಾಲದಲ್ಲಿ ಹರಿಯುವ ನದಿಗಳಿಗೆ ಹೆಚ್ಚು ಹೆಚ್ಚು ಚೆಕ್ ಡ್ಯಾಂಗಳನ್ನು ನಿರ್ಮಿಸಲು ಸರ್ಕಾರ ಯಾವ ಕ್ರಮ ಕೈಗೊಳ್ಳಲಾಗಿದೆ (ವಿವರ ಒದಗಿಸುವುದು)?

**ಶ್ರೀ ಬಿ ಎಸ್ ಯಡಿಯೂರಪ್ಪ (ಮಾನ್ಯ ಉಪಮುಖ್ಯಮಂತ್ರಿಗಳು)**

ಅ) ಬಂದಿದೆ

ಆ) ಅಂತರ್ಜಲ ವೃದ್ಧಿಸಲು ಸರ್ಕಾರವು ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ ಅಂತರ್ಜಲ ಅತೀ ಬಳಕೆಯಾಗುವ ಜಲಾನಯನ ಪ್ರದೇಶಗಳಲ್ಲಿ ಅಂತರ್ಜಲ ಕೃತಕ ಮರು ಪೂರಕ ರಚನೆಗಳನ್ನು ನಿರ್ಮಿಸಲು ಅನುಷ್ಠಾನಗೊಳಿಸುವ ಇಲಾಖೆಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಕೃಷಿ, ಅರಣ್ಯ, ಜಲಾನಯನ ಅಭಿವೃದ್ಧಿ ಮತ್ತು ಇನ್ನಿತರ ಇಲಾಖೆಗಳಿಗೆ ವೈಜ್ಞಾನಿಕವಾಗಿ ಕೋರಿಕೆ ಮೇರೆಗೆ ತಾಂತ್ರಿಕ ಸಲಹೆ ನೀಡುತ್ತದೆ ಇದಲ್ಲದೆ ಪ್ರಾಯೋಗಾತ್ಮಕವಾಗಿ ಅಂತರ್ಜಲ ಕೃತಕ ಮರು ಪೂರೈಕೆ ರಚನೆಗಳ ಕಾರ್ಯಕ್ರಮವನ್ನು ಸಹ ಹಮ್ಮಿಕೊಂಡಿರುತ್ತದೆ

ಇ) ನದಿಗಳಿಗೆ ಚೆಕ್ ಡ್ಯಾಂಗಳನ್ನು ನಿರ್ಮಿಸುವ ಕಾರ್ಯಕ್ರಮ ಹಾಕಿಕೊಂಡಿರುವುದಿಲ್ಲ

**1409 (2048) ಶ್ರೀ ಸುನೀಲ್ ಕುಮಾರ್ ವಿ (ಕಾರ್ಕಳ)** – ಮಾನ್ಯ ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿದ್ಯಾ ವಿಕಾಸ ಯೋಜನೆಯಡಿಯಲ್ಲಿ ಕೆ ಹೆಚ್ ಡಿ ಸಿ ಸಂಸ್ಥೆಯು ಬಟ್ಟೆಗಳನ್ನು ಸರಬರಾಜು ಮಾಡುತ್ತಿರುವುದು ನಿಜವೇ,

ಆ) ಹಾಗಿದ್ದಲ್ಲಿ ಯಾವಾಗಿನಿಂದ ಮಾಡುತ್ತಿದೆ,

ಇ) ಎಷ್ಟು ಮೊತ್ತದ ಬಟ್ಟೆಗಳನ್ನು ವಿತರಿಸಲಾಗಿದೆ, ಈ ಬಾಬ್ತು ಎಷ್ಟು ಹಣ ಬಾಕಿ ಸರ್ಕಾರದಿಂದ ಬರಬೇಕಾಗಿದೆ, ಬಾಕಿ ಇರಲು ಕಾರಣಗಳೇನು,

ಈ) ಇದು ಯಾವ ಅವಧಿಯ ಹಣವಾಗಿದೆ ಹಾಗೂ ಇದರ ಪಾವತಿಗೆ ಯಾವ ಕ್ರಮ ಕೈಗೊಂಡಿದೆ,

ಊ) ಯಾವಾಗ ಈ ಬಾಕಿ ಹಣವನ್ನು ಪಡೆಯಲಾಗುವುದು,

ಋ) ಈ ಬಾಕಿ ಹಣ ಪಾವತಿಯಾಗದ ಕಾರಣ ಮುಂದಿನ ವರ್ಷದ ಸಮವಸ್ತ್ರ ವಿತರಣೆಗೆ ತೊಂದರೆಯಾಗುವುದಿಲ್ಲವೇ,

ಋ) ಮುಂದಿನ ವರ್ಷಕ್ಕಾದರೂ ಸಕಾಲಕ್ಕೆ ಸರಿಯಾಗಿ ಸಮವಸ್ತ್ರ ವಿತರಿಸಲು ಯಾವ ಕ್ರಮ ಕೈಗೊಳ್ಳುವುದು,

ಎ) ಈ ನಿಟ್ಟಿನಲ್ಲಿ ಈ ಬಟ್ಟೆ ನೇಯ್ಗೆ ಮಾಡುವ ನೇಕಾರರಿಗೆ ವಿಮಾ ಸೌಲಭ್ಯ ಹಾಗೂ ಇವರಿಗಾಗಿ ಸಾಲದ ಮೇಲಿನ ಬಡ್ಡಿಯನ್ನು ಮನ್ನಾ ಮಾಡುವ ಬಗ್ಗೆ ಯಾವ ಕ್ರಮ ಕೈಗೊಳ್ಳಲಾಗುತ್ತದೆ?

**ಶ್ರೀ ಅಪ್ಪಾಸಾಹೇಬ್ (ಅಪ್ಪು) ಮಲ್ಲಪ್ಪ ಪಟ್ಟಣಶೆಟ್ಟಿ**

ಅ) ವಿದ್ಯಾ ವಿಕಾಸ ಯೋಜನೆಯಡಿ ಶಿಕ್ಷಣ ಇಲಾಖೆಯ ಬೇಡಿಕೆಯಂತೆ ಶಾಲಾ ಮಕ್ಕಳಿಗೆ ಸಮವಸ್ತ್ರಗಳನ್ನು ಕೆ ಹೆಚ್ ಡಿ ಸಿ ವತಿಯಿಂದ ಪ್ರತಿ ವರ್ಷ ಸರಬರಾಜು ಮಾಡಲಾಗುತ್ತಿದೆ

ಆ) 1986–87ನೇ ಸಾಲಿನಿಂದ ನಿಗಮವು ವಿದ್ಯಾ ವಿಕಾಸ ಯೋಜನೆಯಡಿ ಸಮವಸ್ತ್ರಗಳನ್ನು ಶಿಕ್ಷಣ ಇಲಾಖೆಗೆ ಸರಬರಾಜು ಮಾಡುತ್ತಿದೆ

ಇ) 2006–07ನೇ ಸಾಲಿನವರೆಗೆ ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮವು ರೂ 413 87 ಕೋಟಿ ಮೌಲ್ಯದ 615 44 ಲಕ್ಷ ಸೆಟ್ ಸಮವಸ್ತ್ರ ಬಟ್ಟೆಗಳನ್ನು ಸರಬರಾಜು ಮಾಡಿದ್ದು, 2005–06ನೇ ಸಾಲಿನವರೆಗೆ ಸರಬರಾಜು ಮಾಡಿರುವ ಒಟ್ಟು ಮೌಲ್ಯವನ್ನು ಸಾರ್ವಜನಿಕ ಶಿಕ್ಷಣ ಇಲಾಖೆಯು ನಿಗಮಕ್ಕೆ ಪಾವತಿಸಿರುತ್ತದೆ 2006–07ನೇ ಸಾಲಿನಲ್ಲಿ ಸರಬರಾಜು ಮಾಡಿರುವ ಸಮವಸ್ತ್ರಗಳಿಗೆ ರೂ 212 35 ಲಕ್ಷ ಬಾಕಿ ಪಾವತಿಸಬೇಕಾಗಿರುತ್ತದೆ 2006–07ನೇ ಸಾಲಿನಲ್ಲಿ ತಾಲ್ಲೂಕು ಪಂಚಾಯತ್‌ಗಳಿಂದ ರೂ 212 35 ಲಕ್ಷ ಬಾಕಿ ಹಣ ಬರಬೇಕಾಗಿದ್ದು, ಅನುದಾನದ ಕೊರತೆಯಿಂದ ಹಣ ಬಿಡುಗಡೆಯಾಗಿರುವುದಿಲ್ಲ ಈ ಬಾಕಿ ಹಣವನ್ನು ಸಾರ್ವಜನಿಕ ಶಿಕ್ಷಣ ಇಲಾಖೆ ಆಯುಕ್ತರಿಂದ ಪಡೆಯಲು ಕ್ರಮ ಕೈಗೊಳ್ಳಲಾಗುತ್ತಿದೆ

2007–08ನೇ ಸಾಲಿಗೆ ಇಲ್ಲಿಯವರೆಗೂ ಸರಬರಾಜು ಮಾಡಿರುವ ಸಮವಸ್ತ್ರ ಬಟ್ಟೆಗಳ ಮೊತ್ತ ರೂ 2617 44 ಲಕ್ಷಗಳಲ್ಲಿ ರೂ 2331 76 ಲಕ್ಷ ಹಣವನ್ನು ಸಾರ್ವಜನಿಕ ಶಿಕ್ಷಣ ಇಲಾಖೆಯು ಇನ್ನೂ ಪಾವತಿಸಬೇಕಾಗಿದೆ

ಈ) 2006–07 ಮತ್ತು 2007–08ನೇ ಸಾಲಿನ ವಿದ್ಯಾ ವಿಕಾಸ ಯೋಜನೆಗೆ ಸಂಬಂಧಿಸಿದ್ದು, ಈ ಹಣವನ್ನು ಸಾರ್ವಜನಿಕ ಶಿಕ್ಷಣ ಇಲಾಖೆಯಿಂದ ಪಡೆಯಲು ಕ್ರಮ ಕೈಗೊಳ್ಳಲಾಗುತ್ತಿದೆ

ಉ) 2007–08ನೇ ಸಾಲಿನಲ್ಲಿ ಬಾಕಿ ಹಣವನ್ನು ಪಡೆಯಲಾಗುವುದು

ಊ) ಹೌದು, ತೊಂದರೆಯಾಗುತ್ತದೆ

ಋ) ಈಗಾಗಲೇ 2007–08ನೇ ಸಾಲಿಗೆ ಗುಲ್ಬರ್ಗ ಮತ್ತು ಮೈಸೂರು ಕಂದಾಯ ವಿಭಾಗಗಳ ಸರ್ಕಾರಿ ಶಾಲೆಗಳಿಗೆ ಸಮವಸ್ತ್ರ ಸರಬರಾಜು ಕಾರ್ಯವನ್ನು ನಿಗಮವು ಪೂರ್ಣಗೊಳಿಸಿದ್ದು ಉಳಿದ ಬೆಂಗಳೂರು ಮತ್ತು ಬೆಳಗಾಂ ವಿಭಾಗಗಳಿಗೆ ನಿಗದಿತ ದಿನಾಂಕದೊಳಗೆ ಸಮವಸ್ತ್ರಗಳನ್ನು ಸರಬರಾಜು ಮಾಡಲು ಕ್ರಮ ಕೈಗೊಳ್ಳಲಾಗಿದೆ

ಎ) ನೇಕಾರರ ಕಲ್ಯಾಣ ಯೋಜನೆಯಡಿ ನಿಗಮದಡಿ ಕಾರ್ಯ ನಿರ್ವಹಿಸುತ್ತಿರುವ ಎಲ್ಲಾ ನೇಕಾರರಿಗೆ ವಿಮಾ ಯೋಜನೆಯನ್ನು ಅಳವಡಿಸಲಾಗಿದೆ ಸಾಲದ ಮೇಲಿನ ಬಡ್ಡಿಯನ್ನು ಮನ್ನಾ ಮಾಡಲು 2007–08ನೇ ಸಾಲಿನಲ್ಲಿ ಅನುದಾನವಿದ್ದು, ಮನ್ನಾ ಮಾಡಲು ಕ್ರಮ ವಹಿಸಲಾಗುವುದು

**1410 (2049) ಶ್ರೀ ಸುನೀಲ್ ಕುಮಾರ್ ವಿ (ಕಾರ್ಕಳ)** – ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಅರಣ್ಯ ಪ್ರದೇಶ ವಿಸ್ತೀರ್ಣವೆಷ್ಟು,

ಆ) ಇದರಲ್ಲಿ ಅತಿದಟ್ಟ ಅಡವಿ, ಸಾದಾರಣ ದಟ್ಟ ಅಡವಿ ಹಾಗೂ ಬಯಲು ಅಡವಿಗಳು ಯಾವುವು (ಜಿಲ್ಲಾವಾರು ಪೂರ್ಣವಾದ ಮಾಹಿತಿ ನೀಡುವುದು),